Rotary

# JASMINE

ಜಾಸ್ಮಿನ್ | जास्मिन


UNITE FOR GOOD

WEEKLY BULLETIN OF ROTARY CLUB KUNDAPURA SOUTH

Charter No. 23496 | Zone 1, R. I. Dist. 3182 | Charter Date : 04-03-1986




40h year of Service and Fellowship



**Rtn. Francesco Arezzo**
RI President




**Rtn. Palaksha K.**
Dist. Governor




**Rtn. PHF. I. Narayana**
Asst. Governor



**Rtn. Koushik Yadiyal**
Zonal Lieutenant



**Rtn. Sachin Nackathaya**
President



**Rtn. Gerald Crasto**
Secretary



**Rtn. Ramananda Karanth**
Bulletin Editor

Volume 40 | Issue - 2 | 17th July 2025

# IMPRESSION ON INSTALLATION CEREMONY

Time : 7.00 p.m.
Venue : Hotel Shivaprasad Grand, Kundapura

We meet every Thursday at 7-30 p.m.
at Sarojini Madhusoodhan D. Kushe Rotary South Hall, Kundapura

## ಸಂಪಾದಕೀಯ :



ನನ್ನೆಲ್ಲಾ ರೋಟರಿ ಮಿತ್ರರುಗಳಿಗೆ ನನ್ನ ನಮಸ್ಕಾರಗಳು. ತಾ॥10/07/2025 ರಂದು ನಡೆದ ನಮ್ಮ ಕ್ಲಬ್ಬಿನ ಪದಪ್ರದಾನ ಸಮಾರಂಭ ಗುರು ಪೂರ್ಣಿಮೆಯ ದಿನದಂದು ಇಬ್ಬಿಬ್ಬರು ಗುರುಗಳ ಅಂದರೆ ರೊ. ಅಭಿನಂದನ್ ಶೆಟ್ಟಿ ಹಾಗೂ ಪ್ರೊ. ನಿರಂಜನ್ ರಾವ್ ಇವರುಗಳ ವಾಕ್–ಅರ್ಥ ಅಂದರೆ ಮಾತು ಮತ್ತು ಅರ್ಥ ಇವುಗಳ ಅದ್ಭುತ ಜ್ಞಾನಧಾರೆಯು ಜೊತೆ ಜೊತೆಯಾಗಿ ಹೆಜ್ಜೆ ಇಟ್ಟು ನೆರೆದಂತ ಜನರ ಹೃದಯ ಹೊಕ್ಕಿ ಹೊರಬಂದಂತ evening walk ಅವಿಸ್ಮರಣೀಯ. ಇವರೀರ್ವರ ಸಮಾಗಮ ವೇದಿಕೆ ಕಲ್ಪಿಸಿದ ರೊ. ಸಚಿನ್ ನಕ್ಕತ್ತಾಯರಿಗೆ ಅನಂತ ಧನ್ಯವಾದ. ಒಟ್ಟಿನಲ್ಲಿ ಅಂದು ನಮ್ಮ ರೋಟರಿ ಹಾಗೂ ಇನ್ನಿತರ ವಲಯ 1 ರ ರೋಟರಿ ಸದಸ್ಯರೆಲ್ಲ ಎಷ್ಟೊಂದು ನಿಶ್ಯಬ್ದತೆಯನ್ನು ಕಾಯ್ದುಕೊಂಡಿದ್ದರೆಂದರೆ ಎಲ್ಲರೂ ಒಂದು ಒಳ್ಳೆಯ ಘಟನೆ ಸಂಭವಿಸಲು ಒಗ್ಗಟ್ಟಾದಂತಿತ್ತು. R.I. President Rtn. Francesco Arezzo ಜಗತ್ತಿನ ಸರ್ವ ರೋಟರಿ ಸದಸ್ಯರಿಗೆ ಒಂದು ಒಳ್ಳೆಯ ಸಂದೇಶವನ್ನು ನೀಡಿದ್ದಾರೆ. ಅದುವೇ 'Unite for Good' ಅಂದರೆ ಒಂದು ಒಳ್ಳೆಯ ಘಟನೆ, ವಿಚಾರ, ಸಂಶೋಧನೆ, ಯೋಜನೆ ಹಾಗೂ ನಾವಿರುವ ಪರಿಸರದ ಸಮಾಜದ ಏಳಿಗೆಗಾಗಿ ಕಂಡ ಸ್ವಪ್ನ ಸಾಕಾರವಾಗಬೇಕಾದರೆ ನಾವೆಲ್ಲಾ Unite ಆಗಬೇಕು. ಜೊತೆಯಲ್ಲಿ 'TO WELCOME THE GOOD' WE HAVE TO BE UNITE.

ಮಿತ್ರರೇ ಹೇಗೆ ನಾವು ಮೊನ್ನೆ ನಡೆದ ಪದ ಪ್ರದಾನ ಸಮಾರಂಭ ಒಗ್ಗಟ್ಟಾಗಿ ಒಬ್ಬರಿಗೆ ಒಬ್ಬರು ಕೈಜೋಡಿಸಿ ಶ್ರಮಿಸಿದೆವೊ ಅದೇ ರೀತಿ ನಮ್ಮ ಕ್ಲಬ್ಬಿನ ಮುಂಬರುವ ಎಲ್ಲಾ ವಾರದ ಸಭೆಗಳಲ್ಲೂ ಎಲ್ಲಾ ಯೋಜನೆಗಳಲ್ಲೂ ಸರ್ವ ಸದಸ್ಯರು Unite for Good ಎಂಬಂತೆ ಹಾಜರಿದ್ದು ಯಶಸ್ವಿ ಗೊಳಿಸಲಿ ಎಂದು ಹಾರೈಸುತ್ತಾ,

**– ರೊ. ರಮಾನಂದ ಕಾರಂತ್**

---

## ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ನೂತನ ಪದಾಧಿಕಾರಿಗಳ ಪದಗ್ರಹಣ



ಜುಲೈ 10, 2025ರಂದು ಕುಂದಾಪುರದ ಕುಂಭಾಶಿ ರಾಧಾಬಾಯಿ ವೆಂಕಟರಮಣ ಪ್ರಭು ರಂಗಮಂದಿರ, ಭಂಡಾರ್‌ಕಾರ್ಸ್ ಕಾಲೇಜಿನಲ್ಲಿ ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ನೆರವೇರಿಸಿತು. ಈ ಸಂದರ್ಭದಲ್ಲಿ ರೊ.ಸಚಿನ್ ನಕ್ಕತ್ತಾಯ ಅವರು ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡರೆ, ರೊ. ಜೆರಾಲ್ಡ್ ಕ್ರಾಸ್ಟೊ ಅವರು ಕಾರ್ಯದರ್ಶಿ ಹುದ್ದೆಯನ್ನು ಅಲಂಕರಿಸಿದರು.

ನೂತನ ತಂಡಕ್ಕೆ ರೊ. ಪಿ.ಡಿ.ಜಿ. ಅಭಿನಂದನ್ ಶೆಟ್ಟಿ ಅವರು ಅಧಿಕೃತವಾಗಿ ಪದಪ್ರದಾನ ಮಾಡಿಸಿದರು. ತಮ್ಮ ಭಾಷಣದಲ್ಲಿ, ರೊ. ಅಭಿನಂದನ್ ಶೆಟ್ಟಿ ಅವರು, ನಿಜವಾದ ಶಾಂತಿಯು ಕೇವಲ ಯುದ್ಧದ ಅನುಪಸ್ಥಿತಿಯಲ್ಲ, ಬದಲಿಗೆ ಆರೋಗ್ಯ ಮತ್ತು ಸಮೃದ್ಧಿ ಬೆಳೆದು, ಹಸಿವು ನಿವಾರಣೆಯಾಗಿ, ಜನರಲ್ಲಿ ಪ್ರೀತಿ ಮತ್ತು ಸೌಹಾರ್ದತೆ ನೆಲೆಗೊಂಡಿರುವ ಸ್ಥಿತಿ ಎಂದು ಒತ್ತಿ ಹೇಳಿದರು. ಎರಡನೇ ಮಹಾಯುದ್ಧದ ನಂತರ ವಿಶ್ವಸಂಸ್ಥೆಯ ರಚನೆಯಲ್ಲಿ ರೋಟರಿಯ ಐತಿಹಾಸಿಕ ಪಾತ್ರವನ್ನು ಅವರು ಉಲ್ಲೇಖಿಸಿ, ಜಾಗತಿಕ ಶಾಂತಿಗೆ ಸಂಸ್ಥೆಯ ನಿರಂತರ ಬದ್ಧತೆಯನ್ನು ಪ್ರತಿಪಾದಿಸಿದರು.

ಸಮಾರಂಭದಲ್ಲಿ ಸಹಾಯಕ ಗವರ್ನರ್ ರೊ. ಐ. ನಾರಾಯಣ್ ಮತ್ತು ವಲಯ ಲೆಫ್ಟಿನೆಂಟ್ ರೊ. ಕೌಶಿಕ್ ಯಾಡಿಯಾಳ್ ಅವರೂ ಉಪಸ್ಥಿತರಿದ್ದರು. ಈ ಸಮಾರಂಭದಲ್ಲಿ, ಕ್ಲಬ್ ವತಿಯಿಂದ ಚೈತನ್ಯ ವಿಶೇಷ ಶಾಲೆಗೆ ರೊ. ನಂದಾ ನಾಯಕ್ ಪ್ರಾಯೋಜಿಸಿದ ರೂ. 10,000 ಮೌಲ್ಯದ ಚೆಕ್ ಅನ್ನು ಹಸ್ತಾಂತರಿಸುವ ಮೂಲಕ ಸಮಾಜ ಸೇವಾ ಕಾರ್ಯವನ್ನೂ ನಡೆಸಲಾಯಿತು.

ಮುಖ್ಯ ಅತಿಥಿಯಾಗಿದ್ದ ಡಾ. ನಿರಂಜನ್ ಎ. ರಾವ್ ಅವರು ತಮ್ಮ ಭಾಷಣದಲ್ಲಿ, "ವಾಕ್ ಅರ್ಥ" ಅಂದರೆ ಮಾತು ಮತ್ತು ಅರ್ಥಗಳು ಒಂದಕ್ಕೊಂದು ಹೇಗೆ ಅವಿಭಾಜ್ಯವೋ, ಹಾಗೆಯೇ ಸಮಾಜದಲ್ಲಿ ನಮಗೆ ಹಕ್ಕು ಮತ್ತು ಕರ್ತವ್ಯಗಳು ಜೊತೆ ಜೊತೆಯಾಗಿರುತ್ತವೆ. ಹಕ್ಕುಗಳನ್ನು ಪ್ರತಿಪಾದಿಸುವ ನಾವು ಕರ್ತವ್ಯಗಳನ್ನು ಪಾಲಿಸುವುದು ನಮ್ಮೆಲ್ಲರ ಜವಾಬ್ದಾರಿ ಎಂದು ನುಡಿದರು. ಅವರು ಮುಂದುವರೆದು, ನೆಲ, ಜಲ, ಪ್ರಾಣಿ ಮತ್ತು ಸಸ್ಯ ಸಂಕುಲಗಳು ನಮ್ಮ ಮುಂದಿನ ಪೀಳಿಗೆಗಾಗಿ ಸಂರಕ್ಷಿಸಿ ಇಡಬೇಕಾದ ಅಮೂಲ್ಯ ಸಂಪತ್ತು. ಈ ಸಂಪನ್ಮೂಲಗಳ ಟ್ರಸ್ಟಿಗಳಾಗಿ ನಾವಿರುತ್ತೇವೆ ಹೊರತು ಮಾಲೀಕರಲ್ಲ ಎಂಬ ಅತ್ಯದ್ಭುತ ಸಂದೇಶವನ್ನು ನೀಡಿ, ಅವುಗಳನ್ನು ಸಂರಕ್ಷಿಸುವ ಜವಾಬ್ದಾರಿ ನಮ್ಮೆಲ್ಲರ ಮೇಲಿದೆ ಎಂದು ಒತ್ತಿ ಹೇಳಿದರು. ಅಲ್ಲದೆ, ರೋಟರಿ ಚಿಹ್ನೆಯು ನಿರಂತರತೆ ಮತ್ತು ಸಕಾರಾತ್ಮಕ ಬದಲಾವಣೆಯ ಕಡೆಗೆ ನಿರಂತರ ಚಲನೆಯ ಪ್ರತಿನಿಧಿಯಾಗಿದೆ ಎಂದು ವಿವರಿಸಿದರು..

ರೊ. ಉಮೇಶ್ ಪುತ್ರನ್, ರೊ. ಪಿ.ಡಿ.ಜಿ. ಅಭಿನಂದನ್ ಶೆಟ್ಟಿ ಅವರನ್ನು ಪರಿಚಯಿಸಿದರು. ಡಾ॥ ನಿರಂಜನ್ ರಾವ್ ಅವರನ್ನು ರೊ. ರಮಾನಂದ ಕಾರಂತ್ ಪರಿಚಯಿಸಿದರು. ಸಹಾಯಕ ಗವರ್ನರ್ ರೊ. ಐ. ನಾರಾಯಣ್ ಅವರನ್ನು ರೊ. ಕೆ.ಕೆ. ಕಾಂಚನ್ ಪರಿಚಯಿಸಿದರೆ ವಲಯ ಲೆಫ್ಟಿನೆಂಟ್ ರೊ. ಕೌಶಿಕ್ ಯಾಡಿಯಾಳ್ ಅವರನ್ನು ರೊ. ಡಾ. ಉತ್ತಮ್ ಕುಮಾರ್ ಶೆಟ್ಟಿ ಪರಿಚಯಿಸಿದರು. ನೂತನ ಅಧ್ಯಕ್ಷ ಸಚಿನ್ ಪರಿಚಯ ರೊ. ಜೆ. ಶ್ರೀನಾಥ್ ರಾವ್ ನೆರವೇರಿಸಿದರು ಹಾಗೂ ನೂತನ ಕಾರ್ಯದರ್ಶಿಯ ಪರಿಚಯ ರೊ. ಸುಪ್ರೀತ್ ಚಾತ್ರ ನೆರವೇರಿಸಿದರು. ಅಂದು ಕಾರ್ಯಕ್ರಮದಲ್ಲಿ ರೊ. ಸುಮಾ ಪುತ್ರನ್, ರೊ. ರಮೇಶ್, ರೊ. ಶೇಖರ್ ಶೆಟ್ಟಿ ಇವರುಗಳನ್ನು ಹೊಸದಾಗಿ ಕ್ಲಬ್ಬಿಗೆ ಬರಮಾಡಿಕೊಳ್ಳಲಾಯಿತು. ಹೊಸ ಸದಸ್ಯರ ಪರಿಚಯವನ್ನು ರೊ. ಸುರೇಖಾ ಪುರಾಣಿಕ್ ಹಾಗೂ ರೊ. ವಿವಿಯನ್ ಕ್ರಾಸ್ತಾ ಕಾರ್ಯಕ್ರಮಕ್ಕೆ ನೀಡಿದರು. ರೊ. ಜುಡಿತ್ ಮೆಂಡೋನ್ಸಾ ಸ್ವಾಗತಿಸಿ, ರೊ. ಭರತ್ ಶೆಟ್ಟಿ 2024–25 ರ ಸಾಲಿನ ಕಾರ್ಯ ಚಟುವಟಿಕೆಗಳ ವರದಿ ವಾಚಿಸಿದರು. ರೊ. ಶ್ರೀನಿವಾಸ್ ಶೇಟ್ ಅವರ ಪ್ರಾರ್ಥನೆಯೊಂದಿಗೆ ಆರಂಭಗೊಂಡ ಕಾರ್ಯಕ್ರಮವು ರೊ. ಜೆರಾಲ್ಡ್ ಕ್ರಾಸ್ತ ಧನ್ಯವಾದದೊಂದಿಗೆ ಕೊನೆಗೊಂಡಿತು.



ರೋಟರಿ ಕ್ಲಬ್ ಕುಂದಾಪುರ ಸೌತ್ ಪ್ರಾಯೋಜಿತ ನೂತನ ರಿಕ್ಷಾ ನಿಲ್ದಾಣವನ್ನು ಚಾರುಕೊಟ್ಟಿಗೆ ಗ್ರಾಮದಲ್ಲಿ ರೊ ನಂದಾ ನಾಯಕ್ ಮತ್ತು ರೊ. ಸತ್ಯನಾರಾಯಣ ಪುರಾಣಿಕ್ ಅವರು ಉದ್ಘಾಟಿಸಿದರು. ಈ ಕಾರ್ಯಕ್ರಮದಲ್ಲಿ ಅಧ್ಯಕ್ಷ ರೊ. ಸಚಿನ್ ನಕ್ಕತ್ತಾಯ ಅವರು ಆತ್ಮೀಯ ಸ್ವಾಗತ ಕೋರಿದರು ಮತ್ತು ಗ್ರಾಮ ಪಂಚಾಯತ್ ಸದಸ್ಯ ದಿನೇಶ್ ಅವರು ಗೌರವದ ಉಪಸ್ಥಿತಿಯನ್ನು ಹೊಂದಿದ್ದರು. ಕ್ಲಬ್‌ನ ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ಟಾ ಧನ್ಯವಾದ ಸಮರ್ಪಣೆ ಮಾಡಿದರು.



ಜುಲೈ 1, 2025 ರಂದು ರೋಟರಿ ಕ್ಲಬ್ ಕುಂದಾಪುರ ದಕ್ಷಿಣದ ಸದಸ್ಯರು ವೈದ್ಯರ ದಿನವನ್ನು ಆಚರಿಸಿ, ಪ್ರಸಿದ್ಧ ಗೈನೊಕೋಲಾಜಿಸ್ಟ್ ಹಾಗೂ ಸರ್ಕಾರಿ ಆಸ್ಪತ್ರೆ, ಕುಂದಾಪುರದ ಆಡಳಿತಾಧಿಕಾರಿ ಡಾ. ಚಂದ್ರ ಮರಕಲ ಅವರನ್ನು ಸನ್ಮಾನಿಸಲಾಯಿತು. ರೊ. ವಿಜಯ್ ಶೆಟ್ಟಿ ಮತ್ತು ರೊ. ಸುಪ್ರೀತ್ ಚಾತ್ರಾ ಅವರು ವೈದ್ಯರ ಸನ್ಮಾನಕಾರ್ಯಕ್ರಮವನ್ನು ನೆರವೇರಿಸಿದರು. ಅಧ್ಯಕ್ಷರಾದ ರೊ. ಸಚಿನ್ ನಕ್ಕತಾಯ ಕೆ ಅವರು ಕಾರ್ಯಕ್ರಮಕ್ಕೆ ಸ್ವಾಗತ ಕೋರಿದರು ಮತ್ತು ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ಟಾ ಅವರು ಧನ್ಯವಾದ ಅರ್ಪಿಸಿದರು. ಸದಸ್ಯರಾದ ರೊ. ರಾಮಪ್ರಸಾದ್ ಶೇಟ್ ಅವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಹುಟ್ಟುಹಬ್ಬದ ಶುಭಾಶಯಗಳು



ರೊ. ಡಾ. ಅನುಲೇಖಾ ಬಾಯರಿ
ದಿನಾಂಕ : ಜುಲೈ 17
ಮೊಬೈಲ್ : 94839 29968



ರೊ. PP. ಶಾಂತಾರಾಮ ಪ್ರಭು
ದಿನಾಂಕ : ಜುಲೈ 22
ಮೊಬೈಲ್ : 94485 29935

## Installation Dates

**Rotary Club of Kundapura Sunrise**

**Date : 20-07-2025**

**Time : 7.00 p.m.**

**Venue : Kumbashi Radhabhai Venkatramana Prabhu Ranga Mandhira, Bhandarkars' College Campus, Kundapura.**



ಜುಲೈ 1, 2025 ರಂದು ಚಾರ್ಟರ್ಡ್ ಅಕೌಂಟೆಂಟ್ಸ್ ದಿನವನ್ನು ಆಚರಿಸಿ, ಪ್ರಸಿದ್ಧ ಚಾರ್ಟರ್ಡ್ ಅಕೌಂಟೆಂಟ್ ಸಿ.ಎ. ವಸಂತ ಶಾನುಭಾಗ, ಕುಂದಾಪುರ ಅವರನ್ನು ರೊ. ವಿಜಯ್ ಶೆಟ್ಟಿ ಮತ್ತು ರೊ. ಸುಪ್ರೀತ್ ಚಾತ್ರ ಅವರು ಗೌರವಿಸಿದರು. ನೆರವೇರಿಸಿದರು. ಸಭೆಯಲ್ಲಿ ಅಧ್ಯಕ್ಷ ರೊ. ಸಚಿನ್ ನಕ್ಕತಾಯ ಕೆ. ಆಗಮಿಸಿದ ಎಲ್ಲರನ್ನು ಸ್ವಾಗತಿಸಿದರೆ, ಕಾರ್ಯದರ್ಶಿ ರೊ. ಜೆರಾಲ್ಡ್ ಕ್ರಾಸ್ಟೋ ಅವರು ಧನ್ಯವಾದವನ್ನು ಅರ್ಪಿಸಿದರು.



Birthday celebration of Rtn.Doma Chandrashekar

